ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯಕೇಂದ್ರಕಾರ್ಯಾಲಯ, #39, ಶಾಂತಿಗೃಹ, ಅರಮನೆರಸ್ತೆ, ಬೆಂಗಳೂರು – 560 001
ದೂ: (ಸ್ಕೌಟ್ ವಿಭಾಗ)+91-80-2226 0017; (ಗೈಡ್ ವಿಭಾಗ) +91-80-2226 7470; ಫ್ಯಾಕ್ಸ್: +91-80-2226 1047
ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.in

ಸಂಖ್ಯೆ:ಎಸ್‌ಹೆಚ್‌ಕ್ಯೂ/ 1442 /2026–27 ದಿನಾಂಕ:04.11.2026

ಜಿಲ್ಲಾ ಕಾರ್ಯದರ್ಶಿ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ
ಜಿಲ್ಲಾ ಸಂಸ್ಥೆ,
ಬೆಂಗಳೂರು ಉತ್ತರ/ದಕ್ಷಿಣ/ಗ್ರಾಮಾಂತರ,
ಕೋಲಾರ & ಚಿಕ್ಕಬಳ್ಳಾಪುರ.

ಮಾನ್ಯರೆ,

ವಿಷಯ:– ಈಶಾ ಫೌಂಡೇಶನ್‌ನ ವತಿಯಿಂದ ಆಯೋಜಿಸಲಾಗಿರುವ "ಕಲರಿಪಯತ್ತು" ಮಾರ್ಷಲ್ ಆರ್ಟ್ ದೈಹಿಕ ಕಸರತ್ತಿನ ತರಬೇತಿಗೆ ತಮ್ಮ ಜಿಲ್ಲೆಯ ಸ್ಕೌಟ್ಸ್/ಗೈಡ್ಸ್/ರೋವರ್ಸ್/ರೇಂಜರ್ಸ್ ಮತ್ತು ದಳನಾಯಕರನ್ನು ನಿಯೋಜಿಸುವಂತೆ ಕೋರಿ.

ಉಲ್ಲೇಖ:– ಈಶಾ ಫೌಂಡೇಶನ್‌ರವರ ಪತ್ರ ದಿನಾಂಕ:02.11.2026

****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಈಶಾ ಫೌಂಡೇಶನ್ ವತಿಯಿಂದ ದಿನಾಂಕ:15.11.2026 ರಿಂದ 15.12.2026 ರವರೆಗೆ ಸದ್ಗುರು ಸನ್ನಿಧಿ, ಬೆಂಗಳೂರು ಇಲ್ಲಿ "ಕಲರಿಪಯತ್ತು" ಮಾರ್ಷಲ್ ಆರ್ಟ್ ರೀತಿಯ ದೈಹಿಕ ಕಸರತ್ತಿನ ತರಬೇತಿ ಶಿಬಿರವನ್ನು ಆಯೋಜಿಸಿರುತ್ತಾರೆ.

ಸದರಿ ತರಬೇತಿ ಶಿಬಿರದಲ್ಲಿ ದಿನಾಂಕ:15.11.2026 ರಿಂದ 15.12.2026 ರವರೆಗೆ ಪ್ರತಿ ಭಾನುವಾರ 2 ಗಂಟೆಗಳ ಅವಧಿಗೆ ತರಬೇತಿಯನ್ನು ನುರಿತ ತರಬೇತುದಾರರಿಂದ ನೀಡಲಾಗುತ್ತಿದ್ದು, ಈ ತರಬೇತಿಯಲ್ಲಿ ಮೂಳೆ, ಮಾಂಸಖಂಡಗಳನ್ನು ಬಲಪಡಿಸುವ ಕಲೆಯನ್ನು ಕಲಿಸಲಾಗುತ್ತಿದ್ದು, ನಮ್ಮ ಸಂಸ್ಥೆಯ 15 ವರ್ಷ ಮೇಲ್ಪಟ್ಟ ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್ ಹಾಗೂ ದಳನಾಯಕರುಗಳನ್ನು ನಿಯೋಜಿಸುವಂತೆ ಕೋರಿರುತ್ತಾರೆ.

ಆದ್ದರಿಂದ, ತಮ್ಮ ಜಿಲ್ಲೆಯ ಅರ್ಹ ಮತ್ತು ಆಸಕ್ತಿ ಹೊಂದಿದ 15 ವರ್ಷ ಮೇಲ್ಪಟ್ಟ ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್‌ಗಳು ಹಾಗೂ ದಳನಾಯಕರುಗಳನ್ನು ಮೇಲ್ಕಂಡ ತರಬೇತಿ ಶಿಬಿರಕ್ಕೆ ನಿಯೋಜಿಸುವಂತೆ ಕೋರಲಾಗಿದೆ. ನಿಯೋಜಿಸಲ್ಪಟ್ಟವರು ಈಶ ಫೌಂಡೇಶನ್‌ರವರು ಸೂಚಿಸಿರುವ https://online.sadhguru.org/event-register?event=23051-kalari-3-month-program-at-ssb–23051 ಲಿಂಕ್‌ನಲ್ಲಿ ನೊಂದಾಯಿಸಿಕೊಳ್ಳುವಂತೆ ಕ್ರಮವಹಿಸುವುದು. ತಮ್ಮ ಜಿಲ್ಲೆಯಿಂದ ನಿಯೋಜಿಸಲ್ಪಟ್ಟವರ ವಿವರಗಳನ್ನು ರಾಜ್ಯ ಸಂಸ್ಥೆಗೆ ಕಳುಹಿಸುವಂತೆ ತಿಳಿಸಿದೆ.

.....2

ಮೇಲ್ಕಂಡ ತರಬೇತಿ ಶಿಬಿರದ ಕುರಿತು ಹೆಚ್ಚಿನ ಮಾಹಿತಿಗಾಗಿ ಶ್ರೀ ಲೋಕೇಶ್, ಸ್ವಯಂ ಸೇವಕರು, ಈಶ ಫೌಂಡೇಶನ್- 9080935659 ರವರನ್ನು ಸಂಪರ್ಕಿಸುವುದು ಹಾಗೂ ತರಬೇತಿ ಕುರಿತು ತಿಳಿಯಲು ಈ ಕೆಳಕಂಡ ಲಿಂಕ್‌ನಲ್ಲಿರುವ ವೀಡಿಯೋಗಳನ್ನು ವೀಕ್ಷಿಸುವುದು.

https://youtube.com/shorts/Uvf5gPJNk2Y?si=Kk1EZflsafx4mIfE
https://youtube.com/shorts/c3mZ0RfNX3k?si=RTzeneo6f_iEj1MS

ಸ್ಕೌಟ್ಸ್-ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ರಾಜ್ಯ ಕಾರ್ಯದರ್ಶಿ

ಪ್ರತಿಯನ್ನು:

1. ಎ.ಎಸ್.ಓ.ಸಿ/ಡಿ.ಓ/ಎಸ್.ಜಿ.ವಿ/ಎಸ್.ಜಿಎ, ಭಾ.ಸ್ಕೌ&ಗೈ, ಬೆಂಗಳೂರು ಉತ್ತರ/ದಕ್ಷಿಣ/ಗ್ರಾಮಾಂತರ, ಕೋಲಾರ ಮತ್ತು ಚಿಕ್ಕಬಳ್ಳಾಪುರ
2. ಕಛೇರಿ ಪ್ರತಿ